# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಪ್ರೋತ್ಸಾಹ ಧನವನ್ನು ರೂ.10,000/- ದಿಂದ 20,000/- ಕ್ಕೆ ಹೆಚ್ಚು ಮಾಡಿರುವ ಬಗ್ಗೆ.

**ಓದಲಾದ:** 1) ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯ ನಿಯಮಾವಳಿಗಳು 1995-96.

2) ಗ್ರಾಮೀಣಾಭಿವೃದ್ಧಿ ಮಂತ್ರಾಲಯ,ನವದೆಹಲಿ ಇವರ ಪತ್ರ ಜೆ-11015/1/2012- ಎನ್.ಎಸ್.ಎ.[ಪಿ ದಿನಾಂಕ: 8/11/2012.

**ಪ್ರಸ್ತಾವನೆ:**

ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ 18 ರಿಂದ 64 ವಯೋಮಿತಿಯ, ಕುಟುಂಬದ ಮುಖ್ಯ ಸದಸ್ಯನಾಗಿದ್ದು, ದುಡಿಯುವ ವ್ಯಕ್ತಿ ಮರಣವಾದಲ್ಲಿ ಮೃತನ ಕುಟುಂಬಕ್ಕೆ ರೂ.10,000/-ಗಳ ಸಹಾಯಧನವನ್ನು ಪರಿಹಾರವಾಗಿ ನೀಡಲಾಗುತ್ತಿದೆ. ಉಲ್ಲೇಖ(3) ರಲ್ಲಿ ಕೇಂದ್ರ ಸರ್ಕಾರವು ಈ ಯೋಜನೆಯಡಿ ಫಲಾನುಭವಿಗಳಿಗೆ ನೀಡುವ ಅನುದಾನವನ್ನು ರೂ. 10,000/- ದಿಂದ ರೂ.20,000/-ಕ್ಕೆ ಹೆಚ್ಚಿಸಿರುತ್ತದೆ ಮತ್ತು ಮೃತಪಟ್ಟ ವ್ಯಕ್ತಿಯ ವಯೋಮಿತಿಯನ್ನು 18 ರಿಂದ 64 ವರ್ಷಕ್ಕೆ ಬದಲಾಗಿ 18 ರಿಂದ 59 ಕ್ಕೆ ಪರಿಷ್ಕರಿಸಿರುತ್ತದೆ. ಭಾರತ ಸರ್ಕಾರದ ಆದೇಶವನ್ನು ಅನುಷ್ಠಾನಗೊಳಿಸಲು ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 41 ಡಿಎಸ್‌ಪಿ 2012, ಬೆಂಗಳೂರು. ದಿನಾಂಕ:27/02/2013.**

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಮುಖ್ಯ ಸದಸ್ಯನಾಗಿದ್ದು, ದುಡಿಯವ ವ್ಯಕ್ತಿ ಮರಣವಾದಲ್ಲಿ ಅಂತಹ ಕುಟುಂಬಕ್ಕೆ ನೀಡಲಾಗುತ್ತಿರುವ ಸಹಾಯಧನವನ್ನು ರೂ.10000/-ಗಳಿಂದ (ರೂಪಾಯಿ ಹತ್ತು ಸಾವಿರದಿಂದ) ರೂ.20,000/-ಕ್ಕೆ (ರೂಪಾಯಿ ಇಪ್ಪತ್ತು ಸಾವಿರಕ್ಕೆ) ಹೆಚ್ಚಿಸಿದ್ದು, ವಯೋಮಿತಿಯ ಅರ್ಹತೆಯನ್ನು 18 ರಿಂದ 64 ವರ್ಷಕ್ಕೆ ಬದಲು 18 ರಿಂದ 59 ವರ್ಷಕ್ಕೆ ಪರಿಷ್ಕರಿಸಿ ದಿನಾಂಕ: 1/4/2013 ರಿಂದ ಜಾರಿಗೆ ಬರುವಂತೆ ಆದೇಶಿಸಿದೆ. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದ್ದು, ಮಾರ್ಗಸೂಚಿಯಲ್ಲಿರುವ ನಿಯಮಾವಳಿಯನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಕಾತ್ಯಾಯಿನಿ ದೇವಿ) 28/2/13
ಪೀಠಾಧಿಕಾರಿಗಳು,
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು
ಕಂದಾಯ ಇಲಾಖೆ.

**ಇವರಿಗೆ:** ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

**ಪ್ರತಿಯನ್ನು.**

ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ.ಮತ್ತು ಇ) ಕರ್ನಾಟಕ, ಬೆಂಗಳೂರು.
ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ ಬೆಂಗಳೂರು.
ಸರ್ಕಾರದ ಕಾರ್ಯದರ್ಶಿಗಳು, (ಆಯವ್ಯಯ ಮತ್ತು ಸಂಪನ್ಮೂಲ), ವಿಧಾನ ಸೌಧ.
ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
ಎಲ್ಲಾ ಉಪ ವಿಭಾಗಧಿಕಾರಿಗಳು,
ಎಲ್ಲಾ ತಹಸೀಲ್ದಾರರು, ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

Sent

# ಮಾರ್ಗಸೂಚಿ

## ಬಡತನ ರೇಖೆಗಿಂತ ಕೆಳಮಟ್ಟದ ಕುಟುಂಬದ ಪೋಷಕ ಸದಸ್ಯರು ಮೃತಪಟ್ಟಲ್ಲಿ ಅವರ ಕುಟುಂಬ ನೆರವಿಗಾಗಿ ಸಹಾಯಧನ ನೀಡುವ ಬಗ್ಗೆ ಮಾರ್ಗಸೂಚಿ

1. **ಅರ್ಹತೆ :**

- ಮೃತ ವ್ಯಕ್ತಿಯು 18 ರಿಂದ 59 ವರ್ಷದೊಳಗಿರಬೇಕು
- ಮೃತ ವ್ಯಕ್ತಿಯು ಕುಟುಂಬದ ಪ್ರಾಥಮಿಕ ದುಡಿಯುವ ವ್ಯಕ್ತಿಯಾಗಿರುಬೇಕು
- ಮೃತ ವ್ಯಕ್ತಿಯು ಬಡತನ ರೇಖೆಗಿಂತ ಕೆಳಮಟ್ಟದ ಕುಟುಂಬದವರಾಗಿರಬೇಕು
- ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶಗಳಲ್ಲಿ ರೂ.12,000/-ಗಳು ಮತ್ತು ನಗರ ಪ್ರದೇಶಗಳಲ್ಲಿ ರೂ.17,000/-ಗಳು ಮೀರಿರಬಾರದು.
- ಮೃತ ವ್ಯಕ್ತಿಯು ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ವಾಸಿಸುತ್ತಿರಬೇಕು

2. **ಮಂಜೂರಾತಿ ಪ್ರಾಧಿಕಾರ :**

- ಸಂಬಂಧಿಸಿದ ತಾಲ್ಲೂಕಿನ ತಹಸೀಲ್ದಾರರು/ನಾಡ ಕಛೇರಿ ಉಪ ತಹಸೀಲ್ದಾರರು ಮಂಜೂರಾತಿ ಪ್ರಾಧಿಕಾರಿಯಾಗಿರುತ್ತಾರೆ. ಆದರೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರು ಮಾತ್ರವೇ ಯೋಜನೆಯಡಿ ಸಹಾಯಧನವನ್ನು ಸಂಬಂಧಿಸಿದ ಫಲಾನುಭವಿಗೆ ಚೆಕ್ ಮೂಲಕ ವಿತರಿಸುವ ವ್ಯವಸ್ಥೆ ಮಾಡುವುದು.

3. **ಮಂಜೂರಾತಿ ಕ್ರಮ :**

- ಅನುಬಂಧ-2 ರಲ್ಲಿನ ನಮೂನೆಯಲ್ಲಿ ಅರ್ಜಿಯನ್ನು ಪೂರ್ಣ ದಾಖಲಾತಿಗಳೊಂದಿಗೆ ನೀಡತಕ್ಕದ್ದು.
- ಸದರಿ ಯೋಜನೆಯಡಿ ಕುಟುಂಬದ ದುಡಿಯುವ ವ್ಯಕ್ತಿ ಮೃತ ಪಟ್ಟ ದಿನಾಂಕದಿಂದ 6 ತಿಂಗಳೊಳಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ನೀಡತಕ್ಕದ್ದು.
- ಕುಟುಂಬದ ಸದಸ್ಯರು/ವಾರಸುದಾರರು ಅರ್ಜಿಯನ್ನು ಸಂಬಂಧಿಸಿದ ತಹಸೀಲ್ದಾರರು/ ಉಪ ತಹಸೀಲ್ದಾರರಿಗೆ ತಮ್ಮ ವಾಸಸ್ಥಳ ವ್ಯಾಪ್ತಿಯ ತಾಲ್ಲೂಕು ಕಛೇರಿಯಲ್ಲಿ / ನಾಡ ಕಛೇರಿಯಲ್ಲಿ ಸಲ್ಲಿಸಬೇಕು
- ಅರ್ಜಿಯಲ್ಲಿ ಮೃತ ವ್ಯಕ್ತಿಯ ಹೆಸರು, ವೃತ್ತಿ, ವಾಸಸ್ಥಳ, ವಯಸ್ಸು, ಲಿಂಗ, ಮರಣದ ದಿನಾಂಕ ಹಾಗೂ ಮೃತರನ್ನು ಗುರುತಿಸುವ ಇಬ್ಬರು ಜವಾಬ್ದಾರಿ ಸಾಕ್ಷಿದಾರರ ಸಹಿ ಪಡೆಯತಕ್ಕದ್ದು.
- ಸಂಬಂಧಪಟ್ಟ ಕಂದಾಯ ನಿರೀಕ್ಷಕರಿಂದ ಮೃತ ವ್ಯಕ್ತಿ ಕುಟುಂಬದ ಮುಖ್ಯ ದುಡಿಯುವ ವ್ಯಕ್ತಿಯೇ ಎಂಬ ಬಗ್ಗೆ ಸ್ಥಳ ತನಿಖೆ ನಡೆಸಿ ದೃಢೀಕರಿಸಿಕೊಳ್ಳತಕ್ಕದ್ದು.
- ಅರ್ಜಿಯಲ್ಲಿರುವ ವಿವರಗಳನ್ನು ಪರಿಶೀಲಿಸಿದ ನಂತರ ಅರ್ಹರಿಗೆ ನೆರವು ಧನವನ್ನು ನೀಡಲು ಮಂಜೂರಾತಿ ಆದೇಶ ನೀಡುವುದು.
- ಅನುದಾನವನ್ನು ಮೃತ ವ್ಯಕ್ತಿಯ ಜೀವಂತ ವಾರಸುದಾರರಿಗೆ/ಅವಲಂಭಿತ ಸದಸ್ಯರಿಗೆ ಬಿಡುಗಡೆ ಮಾಡುವುದು.